ನನ್ನ ಓದು

# ರಾಮಾಯಣದ ಅರಿವನ್ನು ವಿಸ್ತರಿಸುವ ಭರತಕಲ್ಪ



**ಭಾರತಿ ದೇವಿ ಪಿ.**

'ರಾಮರಾಜ್ಯ' ಎನ್ನುವ ಮಾತನ್ನು ನಾವು ಇದುವರೆಗೆ ಆದರ್ಶ ರಾಜ್ಯ (ಯುಟೋಪಿಯಾ) ಎಂಬರ್ಥದಲ್ಲಿ ಬಳಸುತ್ತಾ ಬಂದಿದ್ದೇವೆ. ಮಹಾತ್ಮಾ ಗಾಂಧೀಜಿಯವರಿಂದ ಹಿಡಿದು ಬೇರೆಬೇರೆಯವರು ಇದನ್ನು ಬೇರೆಬೇರೆ ಅರ್ಥದಲ್ಲಿ ಬಳಸಿದ್ದಾರೆ. ಇದು ಬಹುಸಂಖ್ಯಾತರ ಮನ್ನಣೆ ಪಡೆದ, ಧರ್ಮಕೇಂದ್ರಿತ ಅರ್ಥ ಪಡೆದುಕೊಳ್ಳುತ್ತಿರುವ ಇವತ್ತಿನ ಸಂದರ್ಭದಲ್ಲಿ ಇದು ಯಾರ ಪಾಲಿನ ಆದರ್ಶ ರಾಜ್ಯ? ಯಾರ ಹಿತಾಸಕ್ತಿಯನ್ನು ಕಾಯುತ್ತಿದೆ? ಎಂಬ ಪ್ರಶ್ನೆಗಳು ನಮ್ಮನ್ನು ಗಾಢವಾಗಿ ಕಾಡುತ್ತಿವೆ. ಈ ಹೊತ್ತಿನಲ್ಲಿ ಆರ್. ಸುನಂದಮ್ಮ ಅವರ ಕಾದಂಬರಿ, 'ಭರತಕಲ್ಪ' ಇನ್ನೊಂದು ಬಗೆಯ 'ಆದರ್ಶ ರಾಜ್ಯ'ದ ಕಲ್ಪನೆಯನ್ನು ಮಂಡಿಸುತ್ತದೆ. ಇದು ಬುಡಕಟ್ಟು ಸಮುದಾಯ, ಮಹಿಳೆಯರು, ಶ್ರಮಿಕರು ಹೀಗೆ ಎಲ್ಲರನ್ನೂ ಒಳಗೊಂಡ ಚಿಂತನೆಯಿಂದ ರೂಪುಗೊಂಡ ಕಲ್ಪನೆ. ನಾವು ಇದುವರೆಗೆ ಕೇಳುತ್ತಾ ಬಂದಿರುವುದು ರಾಮ ವನವಾಸಕ್ಕೆ ಹೋದ ನಂತರದಲ್ಲಿ – ರಾಮ, ಸೀತೆ, ಲಕ್ಷ್ಮಣರಿಗೆ ಕಾಡಲ್ಲಿ ಏನಾಯಿತು ಎಂಬ ಕಥನವನ್ನೇ. ಈ ಕೃತಿ ಅವರು ತೆರಳಿದ ಬಳಿಕ ಅಯೋಧ್ಯೆಯಲ್ಲಿ ಏನಾಯಿತು ಎಂಬುದನ್ನು ಕಥಿಸುವ, ಇತಿಹಾಸದಲ್ಲಿ, ಸ್ಮೃತಿಯಲ್ಲಿ ಮರೆವಿಗೆ ಸಂದ, ಬದಿಗೆ ಸರಿಸಲಾದ ಸಂಗತಿಗಳ ಕಡೆಗೆ ಗಮನ ಸೆಳೆಯುವ ಕೆಲಸ ಮಾಡುತ್ತದೆ.

ಈ ಕೃತಿ ಒಂದು ರಾಜಕೀಯ ಸಿದ್ಧಾಂತವನ್ನು ಮಂಡಿಸುತ್ತದೆ, ಅದು ಪ್ರೀತಿಯ ಸಿದ್ಧಾಂತ. ಎಲ್ಲರ ಏಳಿಗೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯ ಕಟ್ಟಬಹುದಾದ ಸಾಧ್ಯತೆಯ ಕುರಿತು ಭರತ ನಡೆಸಿದ ಹುಡುಕಾಟ, ಪ್ರಯತ್ನ, ಈ ಹಾದಿಯಲ್ಲಿ ಅವನ ವ್ಯಕ್ತಿತ್ವ ಜೊತೆಗಿರುವವರ ಜೊತೆಗೇ ಮಾಗುತ್ತಾ ಬಂದ ಪರಿ ಎಲ್ಲವನ್ನೂ ಈ ಕೃತಿ ತೋರುತ್ತದೆ. ರಾಜಧರ್ಮ ಅಂತ ಇದ್ದರೆ, ಭರತ ರಾಜನಾಗದೇ ಅದನ್ನು ಹೇಗೆ ಪಾಲಿಸುತ್ತಾ ಇದ್ದ ಎಂಬುದನ್ನು ಇಲ್ಲಿ ಕಾಣಿಸುವ ಯತ್ನ ಮಾಡಲಾಗಿದೆ.